<u>ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ</u>

CC No : 1093/2016

CW.7 PW.3

ಹೆಸರು : ಶಿವಣ್ಣ
ತಂದೆ : ದೇವಯ್ಯ
ವಯಸ್ಸು : 49 ವರ್ಷ
ಉದ್ಯೋಗ : ಏನೂ ಇಲ್ಲ
ವಾಸ : ಟಿ.ನರಸೀಪುರ.

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿ: 15.02.2025

ಪೋಲೀಸರ ಕೋರಿಕೆಯ ಮೇರೆಗೆ ಮಾಲು ಅಮಾನತ್ತುಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಮಾಲು ಅಮಾನತ್ತು ಪಂಚನಾಮೆಯನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು. ನಿಪಿ.4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

<u>ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ತೀರ್ಮಾನಿಸಿ ಅಭಿಯೋಜಕರ ಕೋರಿಕೆಯ ಮೇರೆಗೆ ಪಾಟೀ ಸವಾಲುಗೆ ಅನುಮತಿಸಲಾಯಿತು. ಪಾಟೀ ಸವಾಲು: ಎ.ಪಿ.ಪಿ. ಯವರಿಂದ:-</u>

ದಿ-23.08.2016 ರಂದು ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಗೆ ಮುಂಭಾಗ ಮಧ್ಯಾಹ್ನ 12.30 ರಿಂದ 1 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-8 ಮತ್ತು 9 ರವರ ಸಮಕ್ಷಮ ನಿಪಿ. 4 ರಂತೆ ಮಾಲು ಅಮಾನತ್ತು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಉಂಟು ಮಾಡಿದ ಆರೋಪಿಯ ವಾಹನ ಸಂಖ್ಯೇ ಕೆಎ 05 ಇಎಫ್1547 ದ್ವಿಚಕ್ರವಾಹನವನ್ನು ನನ್ನ ಹಾಗೂ ಚಾಸಾ-8 ಮತ್ತು 9 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಏನು

ಬರೆದಿದೆ ಎಂದು ನನಗೆ ಗೊತ್ತಿದ್ದರೂ ಸಹ ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರಃ ವಕೀಲರಿಂದಃ

ಆರೋಪಿತರ ಪರವಾಗಿ ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.